ದಿನಾಂಕ: 09.052022 ರಂದು ಬೆಳಗ್ಗೆ 10.30 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ. ಸತ್ಯನಾರಾಯಣರಾಜ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:- ಶ್ರೀ ಎ. ಸತ್ಯನಾರಾಯಣರಾಜ್, ನೋಡಲ್ ಅಧಿಕಾರಿಗಳು ಹಾಗೂ ಸದಸ್ಯರು

1. ಶ್ರೀ ಎ. ಸತ್ಯನಾರಾಯಣರಾಜ್, ನೋಡಲ್ ಅಧಿಕಾರಿಗಳು ಹಾಗೂ ಸದಸ್ಯರು
2. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
3. ಶ್ರೀಮತಿ ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀಮತಿ ರೂಪಶ್ರೀ, ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ವೆಂಕಟೇಶ್

ದಿನಾಂಕ: 21.04.2022 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ. ಹಾಗು ದಿನಾಂಕ: 09.05.2022ರ ಬೆಳಗ್ಗೆ 10.30 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ ಎಸ್.ಬಿ.ಐ. ಆಫೀಸರ್ಸ್ ಸಮುದಾಯ ಭವನ, ಎಸ್.ಬಿ.ಐ. ಕಾಲೋನಿ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಹಿರಿಯ ಆರೋಗ್ಯಾಧಿಕಾರಿಗಳು ಕೋವಿಡ್-19ರ ಬಗ್ಗೆ ಸಭೆಗೆ ಶ್ರೀಮತಿ ರಾಜೇಶ್ವರಿ, ಹಿ.ಆ.ಪ. ರವರು ಸದರಿ ಸಾಂಕ್ರಾಮಿಕ ರೋಗದ ಬಗ್ಗೆ ನಮ್ಮಲ್ಲಿ ಯಾವುದೇ ತರಹದ ಲಸಿಕೆಯಾಗಲಿ ಅಥವಾ ಪರಿಕ್ಷಿಸುವುದಾಗಲಿ ಯಾವುದಕ್ಕೂ ತೊಂದರೆ ಇಲ್ಲ ಒಂದು ವೇಳೆ ಏನಾದರೂ ಸಾಂಕ್ರಾಮಿಕ ರೋಗ ಕಂಡು ಬಂದಲ್ಲಿ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಾಹಿತಿ ನೀಡುವಂತೆ ಸಭೆಯಲ್ಲಿ ತಿಳಿಸುತ್ತಾ ಹಾಗೂ ಎಲ್ಲಾ ಶಾಲೆಗಳಿಗೆ ಕೋವಿಡ್ ಸಾಂಕ್ರಾಮಿಕ ರೋಗದ ಔಷಧಿಗಳನ್ನು ಸರಬರಾಜು ಮಾಡುವ ಕೆಲಸ ಪ್ರಗತಿಯಲ್ಲಿದೆ.

2. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳು ಬಿದ್ದಿರುವುದರಿಂದ ತುರ್ತಾಗಿ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಸಭೆಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ ರವರು ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳುವುದಾಗಿ ಹಾಗೂ ನೋಡಲ್ ಅಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿದಂತೆ, ಮಾನ್ಯ ಕಾರ್ಯಪಾಲಕ ಅಭಿಯಂತರರು [ರಾಜಾಜಿನಗರ] ರವರು ಈಗಾಗಲೇ ಗುಂಡಿ ಮುಚ್ಚಲು ಕೆಲಸದ ಆದೇಶ ನೀಡಲಾಗಿದ್ದು, ಪ್ರಸ್ತುತ ದಿನಗಳಲ್ಲಿ ಮಳೆ ಬೀಳುವುದರಿಂದ ಡಾಂಬರೀಕರಣ ಮೂಲಕ ಗುಂಡಿ ಮುಚ್ಚಲು ಸ್ವಲ್ಪ ವಿಳಂಭವಾಗಿರುತ್ತದೆ, ಮುಂದಿನ ದಿನಗಳಲ್ಲಿ ಗುಂಡು ಮುಚ್ಚಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ತಿಳಿಸಿರುತ್ತಾರೆ.

3.ಶ್ರೀಮತಿ ರೂಪಶ್ರೀ ಕಿರಿಯ ಆರೋಗ್ಯ ಪರಿವೀಕ್ಷಕರು ಇತ್ತೀಚಿನ ದಿನಗಳಲ್ಲಿ ಮಳೆ ಬೀಳುವುದರಿಂದ ಮರದ ಕೊಂಬೆ ಮತ್ತು ಎಲೆಗಳು ಜಾಸ್ತಿ ಪ್ರಮಾಣದಲ್ಲಿ ಉಲ್ಬಣಗೊಳ್ಳುವು ಹಿನ್ನಲೆಯಲ್ಲಿ ಪ್ರತಿ ದಿನ ಸ್ವಚ್ಚತಾ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸಭೆಯಲ್ಲಿ ಸೂಚಿಸಲಾಗಿರುತ್ತದೆ.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸಹಿ) 21/5/22
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101

Scanned by CamScanner